# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಆರಾಧನಾ ಯೋಜನೆಯಲ್ಲಿ ಸರ್ಕಾರದ ಸಮಗ್ರ ಮಾರ್ಗಸೂಚಿಗಳಲ್ಲಿ ಬದಲಾವಣೆಯಾಗಬೇಕಾದ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ:ಕಂಇ 104 ಮುಭೂಅ 91 ದಿನಾಂಕ:10-7-91,
2) ಸರ್ಕಾರದ ಆದೇಶ ಸಂಖ್ಯೆ:ಕಂಇ 50 ಮುಸರ 95 ದಿನಾಂಕ:19-10-95,
3) ಸರ್ಕಾರದ ಆದೇಶ ಸಂಖ್ಯೆ:ಕಂಇ 104 ಮುಜಇ 95 ದಿನಾಂಕ:29-12-95,
4) ಧಾರ್ಮಿಕದತ್ತಿ ಆಯುಕ್ತರ ಪತ್ರ ಸಂ.ಆರಾಧನಾ: 84:95-96, ದಿನಾಂಕ:5-2-96.

ooo

## ಪ್ರಸ್ತಾವನೆ:

ಮೇಲೆ ಓದಲಾದ 1ರ ಆದೇಶದಲ್ಲಿ ಆರಾಧನಾ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಮಾರ್ಗಸೂಚಿಗಳನ್ನು ರಚಿಸಲಾಗಿದೆ.

ಕ್ರಮಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಆರಾಧನಾ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳನ್ನು ರಚಿಸುವ ಬಗ್ಗೆ ಈ ತನಕ ಹೊರಡಿಸಲಾದ ಎಲ್ಲಾ ಆದೇಶಗಳನ್ನು ಹಿಂತೆಗೆದುಕೊಂಡು ವಿಧಾನಸಭಾ ಕ್ಷೇತ್ರವಾರು ಸಮಿತಿಗಳ ರಚನೆ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಕ್ರಮಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ ಆರಾಧನಾ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ಹಾಗೂ ಆರಾಧನಾ ಸಮಿತಿಗಳ ರಚನೆ ಬಗ್ಗೆ ಕೆಲವೊಂದು ಷರತ್ತುಗಳು ಮತ್ತು ನಿಬಂಧನೆಗಳು ಈಗ ಅಳವಡಿಸುತ್ತಿರುವ ಕ್ರಮಕ್ಕೆ ಅನುಗುಣವಾಗಿಲ್ಲದ ಕಾರಣ ದಿನಾಂಕ:10-7-91ರಲ್ಲಿ ಹೊರಡಿಸಿದ ಮೂಲ ಮಾರ್ಗದರ್ಶನಕ್ಕೆ ಕೆಲವು ಬದಲಾವಣೆಗಳನ್ನು ಮಾಡಿ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಕ್ರಮಸಂಖ್ಯೆ (4)ರಲ್ಲಿ ಓದಲಾದ ಪತ್ರದಲ್ಲಿ ಧಾರ್ಮಿಕದತ್ತಿ ಆಯುಕ್ತರು ಯೋಜನೆಯಡಿಯಲ್ಲಿ ಗುಡಿಗಳ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕೆ ರೂ.20,000-00ರ ವರೆಗೆ ಹಣ ಮಂಜೂರು ಮಾಡಲು ಅವಕಾಶವಿದ್ದು ಸದರಿ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತ್: ತಾಲ್ಲೂಕು ಪಂಚಾಯತ್ ಇಂಜಿನಿಯರಿಂಗ್ ವಿಭಾಗದವರ ಮೂಲಕ ಕೆಲಸ ಮಾಡಿಸುವ ನಿರ್ಬಂಧವನ್ನು ಹಾಕಿರುವುದರಿಂದ ಈ ಕಾಮಗಾರಿಗಳನ್ನು ಶೀಘ್ರವಾಗಿ ಮುಗಿಸಲು ತೊಂದರೆ ಇರುವುದರಿಂದ ಈ ನಿರ್ಬಂಧವನ್ನು ಸಡಿಲಗೊಳಿಸುವಂತೆ ಜಿಲ್ಲಾಧಿಕಾರಿಗಳು ಸಮ್ಮೇಳನದಲ್ಲಿ ಸರ್ಕಾರವನ್ನು ಕೋರಿರುವುದಾಗಿ ವರದಿ ಮಾಡಿರುತ್ತಾರೆ. ಈ ದಿಶೆಯಲ್ಲಿ ಆರಾಧನಾ ಯೋಜನೆಯಡಿಯಲ್ಲಿ ನಕ್ಷೆ ಮತ್ತು ಅಂದಾಜುಪಟ್ಟಿಯನ್ನು ಸ್ಥಳೀಯ ಖಾಸಗಿ ಅಥವಾ ಸರ್ಕಾರಿ ಇಂಜಿನಿಯರುಗಳಿಂದ ತಯಾರಿಸಿ ಸದರಿ ಕಾಮಗಾರಿಯನ್ನು ದೇವಾಲಯದ ಸ್ಥಳೀಯ ಸಮಿತಿ ಅಥವಾ ಸ್ಥಳೀಯ ಗುತ್ತಿಗೆದಾರರು ಅಥವಾ ಭಕ್ತಾದಿಗಳು ಯಾರಾದರೂ ಮುಂದೆ ಬಂದು ಕಾಮಗಾರಿಯನ್ನು ಪೂರೈಸಿ ಅದನ್ನು ತಾಲ್ಲೂಕು ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ಮೌಲ್ಯಮಾಪನ ಮಾಡಿಸಿ ಹಣ ಪಾವತಿಸುವಂತೆ ಸರಳ ವಿಧಾನವನ್ನು ಆರಾಧನಾ ಯೋಜನೆಯ ಮಾರ್ಗಸೂಚಿಗೆ ಅಳವಡಿಸುವುದು ಹಾಗೂ ಕಾಮಗಾರಿಯನ್ನು ಯಾವ ರೀತಿಯಾಗಿ ಯಾರಿಂದ ಮಾಡಿಸಬೇಕು ಎಂಬ ಬಗ್ಗೆ ಕ್ಷೇತ್ರವಾರು ರಚಿಸಿರುವ ಸಮಿತಿಗೆ ಪೂರ್ಣ ಅಧಿಕಾರ ನೀಡಿದರೆ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ತೀರ್ಮಾನ ತೆಗೆದುಕೊಂಡು ಕಾಮಗಾರಿಗಳನ್ನು ಶೀಘ್ರವಾಗಿ ನಡೆಸಲು ಸಹಾಯಕವಾಗುವುದು ಎಂದು ವರದಿ ಮಾಡಿರುತ್ತದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 104 ಮುಇವಿ 95, ಬೆಂಗಳೂರು, ದಿನಾಂಕ: 8-1-1997.**

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಇಲ್ಲಿಯತನಕ ಆರಾಧನಾ ಯೋಜನೆಯಲ್ಲಿ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ನು ಹಿಂತೆಗೆದುಕೊಂಡು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಸೂಚಿಸಿರುವ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಿದೆ. ಈ ಮಾರ್ಗಸೂಚಿಗಳನ್ನು ಆರಾಧನಾ ಯೋಜನೆಯ ಅನುಷ್ಠಾನಕ್ಕಾಗಿ ಅನುಸರಿಸುವಂತೆ ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್. ಎಸ್. ಕುಲಕರ್ಣಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ(ಮುಜರಾಯಿ)

ಗೆ,

1) ಧಾರ್ಮಿಕದತ್ತಿ ಆಯುಕ್ತರು, ಬೆಂಗಳೂರು-18,
2) ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು,
3) ನಿಯಂತ್ರಕರು, ರಾಜ್ಯಲೆಕ್ಕಪತ್ರ ಇಲಾಖೆ,
4) ಎಲ್ಲಾ ಜಿಲ್ಲಾಧಿಕಾರಿಗಳು,
5) ಧರ್ಮದತ್ತಿ ಆಯುಕ್ತರು, ಬೆಳಗಾಂ,
6) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ-7)
7) ಎಲ್ಲಾ ತಹಸೀಲ್ದಾರ್ ಗಳಿಗೆ
8) ವಾರ ಪತ್ರಿಕೆ.
9) ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

ಚ.